(ಇಂದು ದಿನಾಂಕಃ 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 1 ರಿಂದ 3 ನೇ ಎದುರುದಾರರ ಪರ ಶ್ರೀ ಎನ್.ಸಿ.ಎಚ್. ವಕೀಲರಿಂದಃ**

ಮೃತ ಉಮೇಶನ ಹೆಂಡತಿ 1 ನೇ ಎದುರುದಾರಳು ಎಂದರೆ ಸರಿ. 1 ನೇ ಎದುರುದಾರರಿಗೆ 2 ಮತ್ತು 3 ನೇ ಎದುರುದಾರರು ಮಕ್ಕಳು ಎಂದರೆ ಸರಿ. ಉಮೇಶ ಮತ್ತು 1 ನೇ ಎದುರುದಾರರ ಮದುವೆಯನ್ನು ಲಂಬಾಣಿ ಪದ್ದತಿ ಪ್ರಕಾರ ನಾವು ಮತ್ತು ಹಿರಿಯರು ಮಾಡಿದ್ದೆವು ಎಂದರೆ ಸರಿ. ಉಮೇಶ ಪುಣೆಯಲ್ಲಿ 4 ನೇ ಎದುರುದಾರರನ್ನು ಮದುವೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಉಮೇಶ ಬದುಕಿರುವವರೆಗೆ 1 ನೇ ಎದುರುದಾರರಿಗೆ ವಿವಾಹ ವಿಚ್ಚೇದನ ನೀಡಿರಲಿಲ್ಲ ಎಂದರೆ ಸರಿ. ಉಮೇಶನ ವಾರಸುದಾರರು ಎಂದರೆ ನಾನು ನನ್ನ ಗಂಡ 1 ರಿಂದ 3 ನೇ ಎದುರುದಾರರು ಎಂದರೆ ಸರಿ.

ಅಪಘಾತ ಆದ ಸ್ಥಳಕ್ಕೆ ನಾನು ಹೋಗಿಲ್ಲ, ಶವ ತೆಗೆದುಕೊಂಡು ಬರಲು ಆಸ್ಪತ್ರೆಗೆ ಹೋಗಿದ್ದೆ. ಉಮೇಶನ ಅಂತ್ಯ ಸಂಸ್ಕಾರವನ್ನು ನಾನು ನನ್ನ ಗಂಡ ಮತ್ತು 1 ನೇ ಎದುರುದಾರರು ಕೂಡಿಕೊಂಡು ನಮ್ಮ ಗ್ರಾಮದಲ್ಲಿ ಮಾಡಿದ್ದೇವೆ ಎಂದರೆ ಸರಿ. ಉಮೇಶ ಬದುಕಿದ್ದಾಗ ಗುತ್ತಿಗೆ ಆಧಾರದ ಮೇಲೆ ಪ್ಲಾಸ್ಟಿಂಗ್ ಕೆಲಸ ಮಾಡುತ್ತಿದ್ದರು ಮತ್ತು ತಿಂಗಳಿಗೆ 30,000/- ಸಂಪಾದನೆ ಮಾಡುತ್ತಿದ್ದರು ಎಂದರೆ ಸರಿ. ಗಂಡನ ಆದಾಯದ ಬಗ್ಗೆ ಹೆಂಡತಿಗೆ ಸರಿಯಾಗಿ ಗೊತ್ತಿತ್ತು ನಮಗೆ ಗೊತ್ತಿಲ್ಲ ಎಂದರೆ ಸರಿ. ಈ ಅರ್ಜಿಯಲ್ಲಿ ಬರುವ ಪರಿಹಾರದ ಹಣದಲಿ ನನಗೆ ನನ್ನ ಗಂಡನಿಗೆ 1 ರಿಂದ 3 ನೇ ಎದುರುದಾರರಿಗೆ ಮಾತ್ರ ಭಾಗ ಇದೆ ಎಂದರೆ ಸರಿ. ನಾನು ಪಾರ್ವತಿ ಉಮೇಶನ 2 ನೇ ಹೆಂಡತಿ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಉಮೇಶ ತೀರಿ

ಹೋದಾಗ ಆತನಿಗೆ 22 ವಯಸ್ಸು ಆಗಿತ್ತು ಎಂದರೆ ಸರಿ. 4 ನೇ ಎದುರುದಾರರಿಗೆ 50 ವಯಸ್ಸು ಆಗಿದೆ ಎಂದರೆ ಸರಿ. 4 ನೇ ಎದುರುದಾರರಿಗೆ ಬೇರೆ ಗಂಡ ಮತ್ತು ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕಾರಣ ಅವಳಿಗೆ ಪರಿಹಾರದ ಹಣದಲ್ಲಿ ಹಕ್ಕು ಇಲ್ಲ ಎಂದೆರೆ ಸರಿಯಲ್ಲ.

**( 4 ನೇ ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.